# ದಿನಾಂಕ: 05/12/2020 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ 109 ಚಿಕ್ಕಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು:**

| ಕ್ರ. ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ |
|---|---|---|
| 1 | ಶ್ರೀ. ಎಂ.ಎಸ್. ಉಮೇಶ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ |
| 2 | ಶ್ರೀ. ರಾಕೇಶ್ ಗೌಡ | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-109 |
| | ಶ್ರೀಮತಿ. ಅಶ್ವಿನಿ .ಟಿ.ಕೆ | ಘನತ್ಯಾಜ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-109 |
| 3 | ಶ್ರೀ. ನರಸಿಂಹ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-109 |
| 4 | ಶ್ರೀಮತಿ. ಶೈಲಜಾ ಎ.ಟಿ | ಕಿರಿಯ ಅಭಿಯಂತರರು (BESCOM) |
| 5 | ಶ್ರೀ. ನರಸಿಂಹ ಮೂರ್ತಿ | ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-109 |
| 6 | ಶ್ರೀಮತಿ. ಗಂಗಮ್ಮ. ಎನ್ | Link Worker , SWM |
| 7 | ಶ್ರೀಮತಿ. ಪಾರ್ವತಿ. ಜೆ | Link Worker, SWM |
| 8 | ಶ್ರೀ. ಎಂ. ರಾಜು | ಸ್ಥಳೀಯ ನಾಗರೀಕರು |
| 9 | ಶ್ರೀ. ನಟರಾಜು | ಸ್ಥಳೀಯ ನಾಗರೀಕರು |
| 10 | ಶ್ರೀಮತಿ. ರುಕ್ಮಾಂಗದ. ಎಸ್ | ಸ್ಥಳೀಯ ನಾಗರೀಕರು |

ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಲಾಯಿತು. ದಾಖಲಿಸಲಾದ ವಿಷಯಗಳಲ್ಲಿ ಬಾಕಿ ಉಳಿದಿರುವ ಕೆಲಸ ಕಾರ್ಯಗಳನ್ನು ಜರೂರಾಗಿ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಯಿತು.

2. **ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಚರ್ಚಿಸಿದ ವಿಷಯಗಳು:**

| ಕ್ರ. ಸಂ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ಹೊಸ ಶೌಚಾಲಯ ಮತ್ತು ಫುಟ್‌ಪಾತ್ ನಿರ್ಮಾಣದ ಬಗ್ಗೆ | ನೋಡಲ್ ಅಧಿಕಾರಿಯವರು ಮಾನ್ಯ ಆಯುಕ್ತರ ಆದೇಶದನ್ವಯ BBMP MyCityMyBudget2021-22 ರಲ್ಲಿ ನಗರದ ಅಭಿವೃದ್ದಿಪಡಿಸುವ ಸಲುವಾಗಿ ಅಯವ್ಯಯ ತಯಾರಿಸಲು ಮಹಾನಗರಪಾಲಿಕೆ ಜನಾಗ್ರಹದೊಂದಿಗೆ ಪಾಲುಗಾರಿಕೆಯಲ್ಲಿ ಒಂದು ದೀರ್ಘಕಾಲದ ಕಾರ್ಯಕ್ರಮ ಹೊಂದಿರುತ್ತದೆ. ಇದರ ಅಡಿಯಲ್ಲಿ ಮುಂದಿನ ಸಾಲಿನಲ್ಲಿ ಎರಡು ಕಾರ್ಯಕ್ರಮಗಳಾದ 1)ಸಾರ್ವಜನಿಕ ಶೌಚಾಲಯ ಮತ್ತು 2)ಪಾದಚಾರಿ ರಸ್ತೆ ಅಭಿವೃದ್ದಿಪಡಿಸಲು ಉದ್ದೇಶಿಸಲಾಗಿರುತ್ತದೆ. ಅದರಂತೆ, ಸಾರ್ವಜನಿಕರ ಅಭಿಪ್ರಾಯವನ್ನು ಪಡೆದು ವಾರ್ಡ್ ವ್ಯಾಪ್ತಿಯಲ್ಲಿ ಶೌಚಾಲಯಗಳ ಅವಶ್ಯಕತೆ ಇರುವ ಸ್ಥಳಗಳನ್ನು ಗುರುತಿಸಿ ಹಾಗೂ ಫುಟ್‌ಪಾತ್ ನಿರ್ಮಾಣ ಅಥವಾ ಅಭಿವೃದ್ಧಿಗೊಳಿಸಬೇಕಾದ ಪ್ರದೇಶಗಳನ್ನು ಗುರುತಿಸಿ ಪ್ರಸ್ತಾವನೆ ಸಲ್ಲಿಸುವಂತೆ ಸಭೆಯಲ್ಲಿ ನೆರೆದಿದ್ದ ಅಧಿಕಾರಿಗಳು ಹಾಗೂ ಸದಸ್ಯರುಗಳಿಗೆ ತಿಳಿಸಿದರು. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಅಭಿಯಂತರರು ವಾರ್ಡ್-109 |
| 2 | ಒಂಟಿಮನೆ ಮಂಜೂರು ಮಾಡುವ ಬಗ್ಗೆ | ಸಭೆಯಲ್ಲಿ ಶ್ರೀಮತಿ. ಸುವರ್ಣಮ್ಮ ರವರು ಒಂಟಿಮನೆ ನಿರ್ಮಾಣ ಮಾಡಲು ಕಡತವನ್ನು ಪ್ರಸ್ತಾವನೆ ಸಲ್ಲಿಸಿದ್ದು ಸದರಿ ಪ್ರಸ್ತಾವನೆಗೆ ವಾರ್ಡ್ ಸದಸ್ಯರ ಅನುಮೋದನೆ ಕೋರಿ ಸಭೆಯಲ್ಲಿ ಮಂಡಿಸಿ ಮೇಲ್ಕಂಡ ಪ್ರಸ್ತಾವನೆಗೆ ವಾರ್ಡ್ ಕಮಿಟಿ ಸದಸ್ಯರು ಸಮ್ಮತಿ ಸೂಚಿಸಿರುವ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಅಭಿಯಂತರರು ವಾರ್ಡ್-109 |

| | | | |
|---|---|---|---|
| 3 | R.O. ಘಟಕದ ಮೇಲೆ ಸ್ಥಳೀಯ ಶಾಸಕರು ಮತ್ತು ಪಾಲಿಕೆ ಸದಸ್ಯರ ಜಾಹಿರಾತು ಫಲಕವನ್ನು ತೆರವುಗೊಳಿಸುವ ಬಗ್ಗೆ | ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಮಾನ್ಯ ಆಯುಕ್ತರ ಆದೇಶದನ್ವಯ ಜಾಹಿರಾತು ಫಲಕವನ್ನು ತೆರವುಗೊಳಿಸಲು ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಂದಾಯ ಅಧಿಕಾರಿ, ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಅಭಿಯಂತರರು ವಾರ್ಡ್-109 |
| 4 | ಚಿಕ್ಕಪೇಟೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೀದಿದೀಪಗಳಿಗೆ Automatic Timer ಅಳವಡಿಸುವ ಬಗ್ಗೆ | ಈ ಬಗ್ಗೆ ಸಭೆಯಲ್ಲಿ ವಿದ್ಯುತ್ ವಿಭಾಗ ವತಿಯಿಂದ Automatic Timer ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಲಾಯಿತು. | ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ |
| 5 | ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರಿ ಮತ್ತು ಪೋಲೀಸ್ ಕಛೇರಿಗಳಲ್ಲಿ Covid-19 ಪರೀಕ್ಷೆಯನ್ನು ಕಾಲಕಾಲಕ್ಕೆ ನಡೆಸುವ ಬಗ್ಗೆ | ಸರ್ಕಾರಿ ಮತ್ತು ಪೋಲೀಸ್ ಕಛೇರಿಗಳಲ್ಲಿ Covid-19 ತಡೆಗಟ್ಟಲು Periodic Swab Testing ಮಾಡವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಆರೋಗ್ಯ ವೈಧ್ಯಾಧಿಕಾರಿಗಳಿಗೆ ತಿಳಿಸಲಾಯಿತು. | ಆರೋಗ್ಯ ವೈಧ್ಯಾಧಿಕಾರಿ |
| 6 | ವಾರ್ಡ್ ವ್ಯಾಪ್ತಿಯ ಕೆಂಪಾಂಬುದಿ ಕೆರೆಯ ಪಕ್ಕದ ರಸ್ತೆ ಬದಿಯಲ್ಲಿ ಅನಧೀಕೃತವಾಗಿ ತ್ಯಾಜ್ಯವನ್ನು ಹಾಗೂ Debris ನ್ನು ಸುರಿಯುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 13/11/2020 ರಂದು ಚಾಮರಾಜಪೇಟೆ ವಿಭಾಗದ ಸಾಮೂಹಿಕ ಸ್ವಚ್ಛತೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಭಾಗಶಃ Debris ಮತ್ತು ತ್ಯಾಜ್ಯವನ್ನು ತೆರವುಗೊಳಿಸಲಾಗಿರುತ್ತದೆ, ಉಳಿದ Debris ಮತ್ತು ತ್ಯಾಜ್ಯವನ್ನು ಮುಂದಿನ ದಿನಗಳಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಲಾಯಿತು. | ಪೋಲೀಸ್ ಇಲಾಖೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಮತ್ತು ಕಾಮಗಾರಿ ವಿಭಾಗ |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

Rajesh Gowda

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು

ಅಧ್ಯಕ್ಷರು &
ನೋಡಲ್ ಅಧಿಕಾರಿ

**<u>ಪ್ರತಿಯನ್ನು:-</u>**

1. ಮಾನ್ಯ ಆಡಳಿತಾಧಿಕಾರಿ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ: 109 ಚಿಕ್ಕಪೇಟೆ ರವರ ಅವಗಾಹನೆಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪಶ್ಚಿಮ ವಿಭಾಗ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BWSSB) ರವರ ಅವಗಾಹನೆಗೆ ಸಲ್ಲಿಸಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BESCOM) ರವರ ಅವಗಾಹನೆಗೆ ಸಲ್ಲಿಸಿದೆ.
10. ಆರೋಗ್ಯ ವೈದ್ಯಾಧಿಕಾರಿ, ಚಿಕ್ಕಪೇಟೆ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
11. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಸಭೆಗೆ ಹಾಜರಾಗಲು ತಿಳಿಸಿದೆ.
12. ಸಹ ಕಂದಾಯ ಅಧಿಕಾರಿ, ರವರಿಗೆ ಸಭೆಗೆ ಹಾಜರಾಗಲು ತಿಳಿಸಿದೆ.
13. ಪೋಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ, ಕಾಟನ್‌ಪೇಟೆ ಪೋಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
14. ಆರಕ್ಷಕ ನಿರೀಕ್ಷಕರು, ಉಪ್ಪಾರ್‌ಪೇಟೆ ಸಂಚಾರಿ ವಿಭಾಗ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
15. ವಾರ್ಡ್ ಸಂಖ್ಯೆ: 109 ಚಿಕ್ಕಪೇಟೆ ವಾರ್ಡ್ ಕಮಿಟಿ ಸದಸ್ಯರು ರವರುಗಳಿಗೆ ಸಭೆಗೆ ಹಾಜರಾಗಲು ತಿಳಿಸಿದೆ.